ಮಾಡಿ ಥಟ್ಟನೇ ಅಭಿನಯಿಸಿ ತೋರಿಸುತ್ತಿದ್ದ ಆಕೆಯನ್ನು ಸುತ್ತಲೂ ಕೂತಿದ್ದ ಮಿಕ್ಕ ಪಾತ್ರಧಾರಿಗಳು ಚಪ್ಪಾಳೆ ಸಿಳ್ಳೆ ಹೊಡೆಯುತ್ತಲೂ ಮತ್ತಷ್ಟು ಹುರಿದುಂಬಿಸಿದರು.

ಆಗಾಗ ಚಹಾ ಕುಡಿಯುವುದು ಮತ್ತೆ ನಾಟಕ ತಾಲೀಮು ಮಾಡುವುದು ಗಂಟೆಗಟ್ಟಲೇ ನಡೆಯುತ್ತಲೇ ಇತ್ತು. ಒಳಕ್ಕೆ ಜನ ನುಗ್ಗಲು ಪ್ರಯತ್ನಿಸಿದರಾದರೂ ತಾಲೀಮಿಗೆ ಸಮಸ್ಯೆಯಾದೀತೆಂದು ಹೊರಕ್ಕೆ ಗದುಮಿದರು. ಕಿಡಕಿಯ ಹೊರಗಡೆ ನೋಡುತ್ತಾ ನಿಂತಿದ್ದ ಜನಗಳು ಕಾಲು ಸೋತು ಸುಸ್ತಾಗಿ ಮನೆ ಕಡೆ ಮುಖ ಮಾಡಿದರು. ಅದಾಗಲೇ ಕತ್ತಲಾಗಿತ್ತು. ನೋಡು ನೋಡುತ್ತಲೇ ಆಕೆಯ ಅಗಾಧ ಸೌಂದರ್ಯಕ್ಕೆ ಸೋತುಹೋಗಿದ್ದ ಪರಸ ಅಲ್ಲೇ ಆಕೆಯನ್ನೇ ನೋಡುತ್ತಾ ನಿಂತ.



ತಾನು ಜೀವಮಾನದಲ್ಲಿ ನೋಡಿದ, ನೋಡುತ್ತಿದ್ದ ಏಕೈಕ ಚೆಲುವಿ ಈಕೆಯೇ ಎನ್ನುವ ತೀರ್ಮಾನಕ್ಕೆ ಬಂದಿದ್ದ. ಮ್ಯಾಗಳ ಓಣ್ಯಾಗಿನ ಸೋಮಯ್ಯನ ಮಗಳು ಮಂಗಳ, ಶೆಟ್ಟಿ ಅಸೋಕಪ್ಪನ ಮಗಳು ಸಾರದ, ಕಡ್ಡಿಪುಡಿ ಸೋಮಣ್ಣನ ಮಗಳು ನಂದಿನಿ ಮೊದಲಾದವರೇ ಈ ಊರಿನ ಹೀರೊಯಿನ್ನುಗಳಾಗಿದ್ದರು. ಏಸೋ ಬಾರಿ ಅವರನ್ನು ಮಾತನಾಡಿಸಲಿಕ್ಕೆ ಹೋಗಿ ಬೈಯಿಸಿಕೊಂಡು ಬಂದಿದ್ದಾಗಿತ್ತು. ಒಂದೆರಡು ಬಾರಿ ಒದೆ ತಿನ್ನುವುದರಿಂದ ಬಚಾವು ಆಗಿದ್ದಾಗಿತ್ತು. ಪ್ರಮಿಳಾಳ ಸೌಂದರ್ಯವನ್ನು ತಕ್ಕಡಿಯ ಒಂದು ಕಡೆ ಇಡೀ ಊರಿನ ಹೀರೋಯಿನ್ನುಗಳ ಸೌಂದರ್ಯವನ್ನು ಇನ್ನೊಂದು ಕಡೆ ಹಾಕಿ ತೂಗಿದರೆ ಪ್ರಮಿಳಾಳು ಆಹಾ ತಾಯಿ ಭೀಮವ್ವ ಮಗ ಪರಸನಿಗೆ ಮದುವೆ ಮಾಡಿಸಲು ಹತ್ತು ಹದಿನೈದು ಹಳ್ಳಿಗಳನ್ನು ತಿರುಗಿ ತಿರುಗಿ ಸೋತಿದ್ದಳು. ಹುಡುಕಿದ ಅಷ್ಟು ಹೆಣ್ಣುಗಳನ್ನು "ಬೇ ಆಕಿ ಮಕದಾಗ ಯಾಳ್ಡು ಪಾಲ್ವು ಮಾಂಸಿಲ್ಲ, ನೋಡಾಕ ರವೋಟು ಲಕ್ಷಣ ಇಲ್ಲ, ಮಕದಾಗ ಒಲ್ಯಾಗಿನ ಬಣ್ಣೈತಿ, ಮೂಗು ಸೊಟ್ಟೈತಿ, ವಚ್ಚುಗಣ್ಣದಾವು, ಸೊಟ್ಟ ನಡಿತಾಳಬೇ, ಆನಿ ಕಿವಿಯಾಗ್ಯಾವು, ಜಡಿ ಮೋಟೈತಿ, ಕಣ್ಣು ಹಂಗದಾವು ಹಿಂಗದಾವು" ಅಂತ ಏನಾದರೊಂದು ಸಬೂಬು ಕೊಟ್ಟು ರಿಜೆಕ್ಟ್ ಮಾಡಿಬಿಟ್ಟಿದ್ದ.

ಪ್ರಮಿಳಾಳ ಉಳಿದುಕೊಳ್ಳುವ ಮತ್ತು ಊಟದ ವ್ಯವಸ್ಥೆಯನ್ನು ಸ್ವತಃ ಕೊಟ್ರಗೌಡರೇ ವಹಿಸಿಕೊಂಡಿದ್ದರು. ಅದಾಗಲೇ ಒಂಬತ್ತು ಗಂಟೆಯಾಗಿತ್ತು. ಸ್ಪೆಂಡರ್ರು ಗಾಡಿ ತಂದಿದ್ದ ಗೌಡರ ಕಡೆ ಹುಡುಗ ಆಕೆಯನ್ನು ಹಿಂದಿನ ಸೀಟಿನಲ್ಲಿ ಕೂರಿಸಿಕೊಂಡು ಡ್ರು ಡ್ರು ಡ್ರೂ... ಎಂದು ಸೌಂಡು ಮಾಡುತ್ತ ದಿಬ್ಬ ಹತ್ತಿ ಹೊರಟುಬಿಟ್ಟ. ಗಾಡಿಯ ಹಿಂದೆಯೇ ಜನಗಳು ಓಡಲು ಪ್ರಯತ್ನಿಸಿದರಾದರೂ, ಕೋಟೆ ವೀರಭದ್ರ ದೇವಸ್ಥಾನ ದಾಟಿ ಮರೆಯಾಗುವವರೆಗೂ ಪರಸ ನೋಡುತ್ತಲೇ ನಿಂತಿದ್ದ...

***

ಪಕ್ಕದ ಬೀದಿಯ ಮಸೀದಿಯಿಂದ ಆಝಾನ್ ಕೇಳಿಸುತ್ತಲೇ ಎಚ್ಚರಗೊಂಡ, ರಾತ್ರಿಯೆಲ್ಲಾ ನಿದ್ದೆಯಿಲ್ಲದೇ ಒದ್ದಾಡಿದ್ದ ಪರಸನಿಗೆ ಅಪರೂಪಕ್ಕೆಂಬಂತೆ ಕನಸುಗಳು. ಕೆಟ್ಟವೋ ಒಳ್ಳೆಯವೋ ಅವನಿಗೆ ತೂಗುವುದು ಕಷ್ಟವಾಯ್ತು. ಆದರೆ ಇಡೀ ಕನಸುಗಳ ತುಂಬೆಲ್ಲಾ ಪ್ರಮಿಳಾಳೆ ಇದ್ದದ್ದು ಖಾತ್ರಿಯಿತ್ತು. ಎಚ್ಚರಾಗುವ ಮುಂಚೆಯೇ ಕನಸು ಒದ್ದಾಡುವಂತೆ ಮಾಡಿ ಎಚ್ಚರಾಗಿಸಿತ್ತು. ತನ್ನ ಕನಸುಗಳಲ್ಲಿ ಬರುತ್ತಿದ್ದ ನೂರಾರು ಹುಡುಗಿಯರ ಜಾಗವನ್ನು ಆಕ್ರಮಿಸಿಕೊಂಡಿದ್ದ ಪ್ರಮಿಳಾಳನ್ನು ಹೊಗಳಬೇಕೋ ಬೈಕೊಳ್ಳಬೇಕೊ ಗೊಂದಲಗೊಂಡ. ಇವತ್ತೇನೇ ಆಗಲಿ ಮುತ್ತಣ್ಣನ ಅಂಗಡಿಗೆ ನುಗ್ಗಿ ಕಿಲೀನ್ ಸೇವಿಂಗು ಮಾಡಿಸುವುದು ಅಂತ ಅಂದುಕೊಂಡವನೇ, ಅದಕ್ಕೂ ಮೊದಲು ಹೊಟ್ಟೆ ಭಾರವನ್ನು ಇಳಿಸಬೇಕೆಂದು ಚರಿಗೆ ಹಿಡಿದು ಹೊರಟ.

ಬೆಳಗ್ಗಿನಿಂದ ದೇವಿಯ ಪೂಜೆ ಜಾತ್ರೆ ನಡೆಯುತ್ತಲೇ ಇತ್ತು. ದೂರದ ಹಳ್ಳಿಗಳಿಂದ ಭಕ್ತರು ಕುಟುಂಬ ಸಮೇತರಾಗಿ ಬಂದು ದೀಡು ನಮಸ್ಕಾರ ಹಾಕುವುದು, ಕುರಿ ಬಲಿ ಕೊಡುವುದು, ಕೂಸುಗಳ ಮೈಗೆಲ್ಲ ಬೇವಿನ ಸೊಪ್ಪು ಕಟ್ಟಿ ಸಾಂಬ್ರಾಣಿಹೊಗೆ ಹಾಕುವುದು, ಈಡುಗಾಯಿ ಹೊಡೆಯುವುದು, ಹೋಳಿಗೆ ಕೋಸಂಬರಿ ಮಾಡಿಕೊಂಡು ಎಡೆ ಕೊಡುವುದು ನಡೆದೇ ಇತ್ತು. ಅಲ್ಲಲ್ಲಿ ಗುಂಪುಗಳಲ್ಲಿ ಹಲಗೆ ಬಾರಿಸುವವರ ನಡುವೆ ಶ್ರೀನಿವಾಸ ಬಾರಿನಲ್ಲಿ ಓಟಿ ಕುಡಿದು ಕುಣಿಯುತ್ತಲೇ ತೊಡರುಗಾಲಾಗಿ ಬೀಳುತ್ತಿದ್ದರು. ದೇವಸ್ಥಾನದ ಅಂಗಳದಲ್ಲಿ ಹೆಂಗಸರು ಕೂದಲು ಹರಡಿಕೊಂಡು ಮೈ ನಡುಗಿಸುತ್ತಲೂ ಹಾ ಹೂ ಎಂದು ವಿಚಿತ್ರ ಗಡಸು ಧ್ವನಿಯಲ್ಲಿ ಮಾತನಾಡುತ್ತಿದ್ದರು. ಸೊಸೆಯಾದವಳು ಅತ್ತೆಯನ್ನು, ಅತ್ತೆಯಾದವಳು ಸೊಸೆಯನ್ನು ಕೂದಲು ಹಿಡಿದು ಜಗ್ಗುವುದು ಹೊಡೆಯುವುದೂ ಪರಸ್ಪರ ಸೇಡು ತೀರಿಸಿಕೊಳ್ಳುವುದು ಮಾಡುತ್ತಿದ್ದರು. ಮೈಮೇಲೆ ಸೀರೆ ಜಾರುತ್ತಿದ್ದರೆ ಪಕ್ಕದಲ್ಲೇ ಕೈ ಹಿಡಿದು ನಿಂತ ವಾರಗಿತ್ತಿಯರು ಒಂದಷ್ಟು ಮಜಾ ತೆಗೆದುಕೊಳ್ಳುತ್ತಲೂ ಅವರನ್ನು ಸಂಭಾಳಿಸುವುದನ್ನು ಮಾಡುತ್ತಿದ್ದರೆ ಸುತ್ತಲಿದ್ದವರು ಸಾಕ್ಷಾತ್ ಕೇರಿಯ ದ್ಯಾವತೆ ಮಾರವ್ವಳು ಇವರುಗಳ ಮೈಮೇಲೆ ಬಂದಿದ್ದಾಳೆಂದು ಕೈ ಮುಗಿದುಕೊಂಡು ಕೆನ್ನೆ ಬಡಿದುಕೊಂಡು ಮುಗ್ಧವಾಗಿ ಒಂದಿಲ್ಲೊಂದನ್ನು ಬೇಡಿಕೊಳ್ಳುತ್ತಿದ್ದರು.

ಗುಡಿಯ ಪಕ್ಕದ ದೊಡ್ಡ ಬಯಲು ಜಾಗದಲ್ಲಿ ನಾಟಕಕ್ಕೆ ವೇದಿಕೆಯನ್ನು ಬಣ್ಣ ಬಣ್ಣದ ಪರದೆಗಳನ್ನು ಇಳಿ ಬಿಟ್ಟು, ಮರ್ಕ್ಯೂರಿ ಬಲ್ಬುಗಳಿಗೆ ಬಣ್ಣದ ಪ್ಲಾಸ್ಟಿಕು ಅಡ್ಡಲಾಗಿ ಕಟ್ಟಲಾಗಿತ್ತು. ನಾಲ್ಕೈದು ಮೈಕುಗಳನ್ನು ನೇತು ಬಿಡಲಾಗಿತ್ತು. ವೇದಿಕೆಯ ಮುಂಭಾಗದಲ್ಲಿ ದೊಡ್ಡ ದೊಡ್ಡ ಧ್ವನಿವರ್ಧಕಗಳನ್ನು ಒಂದರ ಮೇಲೊಂದರಂತೆ ಜೋಡಿಸಿ ಸಜ್ಜುಗೊಳಿಸಲಾಗಿತ್ತು.



ಸಂಜೆ ಸರಿಯಾಗಿ ಏಳು ಗಂಟೆಗೆ ಶಾಸಕರೂ, ಮೂರ್ನಾಲ್ಕು ಕೊಲೆಗಳನ್ನು ಮಾಡಿಸಿ ಕ್ರಿಮಿನಲ್ ಕೇಸೂ ಇದ್ದ, ಕೂಡ್ಲಿಗಿಯಲ್ಲಿ ಎರಡು, ಹರಪನಹಳ್ಳಿಯಲ್ಲಿ ಕೊಟ್ಟೂರಿನಲ್ಲಿ ಒಂದೊಂದು ಸೇರಿದಂತೆ ಒಟ್ಟು ನಾಲ್ಕು ಬಾರುಗಳ ಓನರ್ರೂ, ಬಳ್ಳಾರಿಯ ಹಲವು ಕಡೆ ಮೈನಿಂಗ್ ನಡೆಸುತ್ತಾ ಧಣಿಯೂ ಆಗಿದ್ದ, ಲಂಪಟನೂ ಆಗಿದ್ದ ಮಡ್ಡಿ ಭೀಮಲಿಂಗ ಧಣಿಗಳು ಕಾರ್ಯಕ್ರಮಕ್ಕೆ ಚಾಲನೆ ನೀಡಲಿದ್ದರು. ಸುತ್ತ ಹಳ್ಳಿಯ ಜನಗಳು ಬಂಡಿ ಕಟ್ಟಿಕೊಂಡು ಬಂದು ತಮ್ಮ ಚಿಳ್ಳೆಮಿಳ್ಳೆಗಳೊಂದಿಗೆ ಅಲ್ಲಲ್ಲಿ ಚಾಪೆ ಹಾಕಿಕೊಂಡು, ಮದುವೆಯಾದ ಹೊಸ ಜೋಡಿಗಳು ಒಬ್ಬರನೊಬ್ಬರು ಕೈ ಹಿಡಿದುಕೊಂಡು, ಲಂಗದಾವಣಿಯನ್ನೋ ಚೂಡಿದಾರವನ್ನೋ ಸೀರೆಯನ್ನೋ ಉಟ್ಟಿದ್ದ ಹರೆಯದ ಹುಡುಗಿಯರಿದ್ದಲ್ಲಿಗೆ ಚೆಂದದ ಕ್ರಾಪು ಬಾಚಿಕೊಂಡ ಹುಡುಗರು, ಎಳೆ ಕೂಸುಗಳಿಗೆ ಹಾಲುಣಿಸುತ್ತಾ ತಾಯಂದಿರು, ವಾರೆಗಣ್ಣಿನಲ್ಲಿ ಮೊಲೆಗಳನ್ನು ನೋಡುತ್ತಿದ್ದ ಪೋಲಿ ಮುದುಕರು ಜಮಾಯಿಸಿ ಇಡೀ ಕೇರಿಗೆ ಕೇರಿಯೇ ತುಂಬಿಹೋಗಿತ್ತು.

ಮುಖಕ್ಕೆ ಕಡು ನೀಲಿ ಬಣ್ಣ ಬಳಿದುಕೊಂಡು ಬೀಡಿ ಸೇದುತ್ತಾ ನಿಂತಿದ್ದ ಪಾಲಾಕ್ಷಪ್ಪ ರಾಮ, ಅವನ ತಲೆ ಮೇಲಿನ ತುರುಬು ತುಸು ವಾಲಿದಂತೆ ಕಾಣುತ್ತಿತ್ತು. ತಿಳಿ ನೀಲಿ ಬಣ್ಣ ಬಳಿದುಕೊಂಡು ಬೆವರುತ್ತಿದ್ದ ಬೆಸ್ತರ ಅಂಜಿನಿ ಲಕ್ಷ್ಮಣನಾಗಿಯೂ, ಮೂತಿಗೆ ಕೆಂಪನ್ನು ಢಾಳಾಗಿ ಬಳಿದುಕೊಂಡು ಬಾಲ ಸಿಕ್ಕಿಸಿಕೊಳ್ಳುತ್ತಿದ್ದ ಅಗಸರ ರವಿ ಹನುಮಂತ, ದಪ್ಪ ಮೀಸೆಯನ್ನು ಅಂಟಿಸಿಕೊಳ್ಳುತ್ತಿದ್ದ ಪೈಲ್ವಾನ ದುರುಗೇಶ ಹತ್ತು ತಲೆಗಳ ರಾವಣನಾಗಿಯೂ ಪಾತ್ರಧಾರಿಗಳು ತಮ್ಮ ಪಾತ್ರಗಳ ಅನುಗುಣವಾಗಿ ಮೇಕಪ್ಪು ಮಾಡಿಸಿಕೊಳ್ಳುತ್ತಿದ್ದರು. ಗಲಾಟೆಯ ನಡುವೆ ಮೈಕಿನಲ್ಲಿ ಮಕ್ಕಳು ಸಿನಿಮಾ ಹಾಡುಗಳನ್ನು ಹೇಳುವುದು ಮುದುಕೀರು ಸೋ... ಎನ್ನುವುದು ನಡೆದೇ ಇತ್ತು.

ನಿನ್ನೆ ಸಂಜೆ ನಾಟಕ ತಾಲೀಮು ಮುಗಿಸಿಕೊಂಡು ಹೋಗಿದ್ದ ಪ್ರಮಿಳಾಳನ್ನು ಮತ್ತೆ ಮತ್ತೆ ನೋಡಬೇಕೆಂದು ಹವಣಿಸಿದನಾದರೂ ಸಾಧ್ಯವಾಗಿರಲಿಲ್ಲ. ಹಿಂಬಾಲಿಸಿಕೊಂಡು ಹೋಗಬೇಕೆಂದುಕೊಂಡರೂ ಅಷ್ಟು ದೂರ ನಡೆದು ಹೋಗೋದು ಅಸಾಧ್ಯವೆನ್ನಿಸಿತ್ತು. ಊರಿಗೆ ಬಂದೋಳು ಕೇರಿಗೆ ಬರ್ದೇ ಇರ್ತಾಳಾ ಅಂತಂದುಕೊಂಡು ಸುಮ್ಮನಾದ. ನಾಳೆ ನಾಟಕಕ್ಕೂ ಮುನ್ನ ಶತಾಯಗತಾಯ ಮಾತನಾಡಿಸಲೇಬೇಕೆಂದು ಮನಸ್ಸಿನಲ್ಲಿ ಶಪಥಗೈದಿದ್ದ.

ಪ್ರಮಿಳಾ ಮೊದಲೇ ನುರಿತ ಕಲಾವಿದೆ, ಅತಿ ಕಡಿಮೆ ಸಮಯದಲ್ಲಿ ಯಾವುದೇ ಪಾತ್ರಕ್ಕೂ ಒಗ್ಗಿಕೊಳ್ಳುವಂತಹ ಪ್ರವೀಣೆ. ಕೂಡ್ಲಿಗಿ ಸುತ್ತಮುತ್ತ ಮಾತ್ರವಲ್ಲದೇ ರಾಯಚೂರು, ಕಂಪ್ಲಿ, ಗಂಗಾವತಿ, ಬಿಜಾಪುರ, ಕುಷ್ಟಗಿ, ಚಿತ್ರದುರ್ಗ ಸೇರಿದಂತೆ ನೂರಾರು ಊರುಗಳಿಗೆ ಹೋಗಿ ನಾಟಕಗಳಲ್ಲಿ ಅಭಿನಯಿಸಿದ್ದಳು. ಸೀತೆ, ದ್ರೌಪದಿ, ಊರ್ಮಿಳೆ, ಸತಿ ಸಾವಿತ್ರಿ, ತಾರಾಮತಿ ಹೀಗೆ ಪೌರಾಣಿಕ ನಾಟಕಗಳಲ್ಲಿ ಸೈ ಅನ್ನಿಸಿಕೊಂಡವಳು. ಅಷ್ಟೇ ಅಲ್ಲದೆ, ಸಾಮಾಜಿಕ ನಾಟಕಗಳಲ್ಲಿ ಪಾತ್ರಕ್ಕೆ